**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 392

ಸದಸ್ಯರ ಹೆಸರು : ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ

(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 19.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಳೆದ ಮೂರು ವರ್ಷಗಳಲ್ಲಿ ಶಕ್ತಿ ಯೋಜನೆಗೆ ರಾಜ್ಯ ಸರ್ಕಾರವು ಮೀಸಲಿಟ್ಟ ಅನುದಾನವೆಷ್ಟು; ಬಿಡುಗಡೆಗೊಂಡ ಅನುದಾನವೆಷ್ಟು; ಬಳಕೆಯಾದ ಅನುದಾನವೆಷ್ಟು; | ಶಕ್ತಿ ಯೋಜನೆ ಜಾರಿಯಾದ ದಿನಾಂಕ:11.06.2023 ರಿಂದ ದಿನಾಂಕ:31.07.2026 ರವರೆಗೆ ರಾಜ್ಯ ಸರ್ಕಾರವು ಮೀಸಲಿಟ್ಟ ಅನುದಾನ, ಬಿಡುಗಡೆಗೊಳಿಸಿದ ಹಾಗೂ ಬಳಕೆಯಾದ ಅನುದಾನ ಹಾಗೂ ಬಾಕಿ ಇರುವ ಮೊತ್ತದ ವಿವರಗಳನ್ನು **ಅನುಬಂಧ-ಅ** ರಲ್ಲಿ ಒದಗಿಸಲಾಗಿದೆ. |
| ಆ. | 2023 ಏಪ್ರಿಲ್ ನಿಂದ 2026 ಜುಲೈ ಅಂತ್ಯದವರೆಗೆ ಶಕ್ತಿ ಯೋಜನೆಯಲ್ಲಿ ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ ಎಷ್ಟು; ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗಗಳ ಪ್ರಯಾಣಿಕರ ಸಂಖ್ಯೆ ಎಷ್ಟು; ಒಟ್ಟು ಪ್ರಯಾಣಿಕರಿಗೆ ನೀಡಿದ ಟಿಕೆಟ್ ವೆಚ್ಚ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳ ಬಸ್‌ಗಳಲ್ಲಿ ಪ್ರಯಾಣಿಸಿರುವ ಫಲಾನುಭವಿಗಳ ಟಿಕೆಟ್ ಸಂಖ್ಯೆ ಮತ್ತು ಪ್ರಯಾಣದ ವೆಚ್ಚದ ವಿವರಗಳನ್ನು **ಅನುಬಂಧ-ಆ**ರಲ್ಲಿ ಒದಗಿಸಲಾಗಿದೆ.<br><br>ಶಕ್ತಿ ಯೋಜನೆಯಡಿಯಲ್ಲಿ ಪ್ರಯಾಣಿಸುವ ಕರ್ನಾಟಕ ನಿವಾಸಿ ಮಹಿಳೆಯರಿಗೆ (ವಿದ್ಯಾರ್ಥಿನಿಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ) ನಿಗಮದ ವಾಹನಗಳಲ್ಲಿ ಫಲಾನುಭವಿಗಳ ಗುರುತಿನ ಚೀಟಿಯನ್ನು ಪರಿಶೀಲಿಸಿ ಉಚಿತ ಪ್ರಯಾಣ ಚೀಟಿಯನ್ನು ನಿರ್ವಾಹಕರು ನೀಡುತ್ತಿರುವುದರಿಂದ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗಗಳ ಪ್ರಯಾಣಿಕರ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. |
| ಇ. | ಶಕ್ತಿ ಯೋಜನೆಯಡಿ ಸರ್ಕಾರದಿಂದ ಪಾವತಿಗೆ ಬಾಕಿ ಇರುವ ಮೊತ್ತವೆಷ್ಟು; ಯಾವ ಆರ್ಥಿಕ ವರ್ಷದಲ್ಲಿ ಎಷ್ಟು ಮೊತ್ತ ಬಾಕಿ ಇದೆ; ಬಾಕಿ ಇರಲು ಕಾರಣಗಳೇನು; ಬಾಕಿ ಮೊತ್ತವನ್ನು ಯಾವ ಖಾತೆಯಿಂದ ಯಾವ ಸಮಯದೊಳಗೆ ಪಾವತಿಸಲಾಗುವುದು; ಬಾಕಿ ಪಾವತಿಗೆ ಆರ್ಥಿಕ ಇಲಾಖೆಯ ಸಮ್ಮತಿ ಇದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಮುಂದುವರೆದು, ಸಾರಿಗೆ ನಿಗಮುಗಳಿಗೆ ಶಕ್ತಿ ಯೋಜನೆಯಡಿ ಬಾಕಿಯಿರುವ ಮೊತ್ತವನ್ನು ಮರು ಪಾವತಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಈಗಾಗಲೇ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಸರ್ಕಾರದಿಂದ ಅನುದಾನವನ್ನು ಒದಗಿಸಿದ್ದು ಮತ್ತು ಶಕ್ತಿ ಯೋಜನೆಗೆ ಒಟ್ಟಾರೆ ಆರ್ಥಿಕ ಸಹಾಯವನ್ನು ಆಯವ್ಯಯದಲ್ಲಿ ಒದಗಿಸುತ್ತಿರುವ ಹಿನ್ನೆಲೆಯಲ್ಲಿ ಶಕ್ತಿ ಯೋಜನೆಯಡಿ ಬಾಕಿಯಿರುವ ಅನುದಾನವನ್ನು ಒದಗಿಸುವ ಅವಕಾಶವಾಗುವುದಿಲ್ಲವೆಂದು ಆರ್ಥಿಕ ಇಲಾಖೆಯು ತಿಳಿಸಿರುತ್ತದೆ. |

| | | |
|---|---|---|
| ಈ. | ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಶಕ್ತಿ ಯೋಜನೆಯಡಿ ಬಾಕಿ ಇರುವ ಮೊತ್ತವನ್ನು ಪಾವತಿಸಲು ಸರ್ಕಾರ ಯಾವ ಕ್ರಮಕೈಗೊಳ್ಳುತ್ತಿದೆ; ಮೊತ್ತ ಬಾಕಿ ಉಳಿದಿರುವುದರಿಂದ ಸಾರಿಗೆ ಸಂಸ್ಥೆಗೆ ಆರ್ಥಿಕ ಹೊರೆಯಾಗುತ್ತಿಲ್ಲವೇ? | ಶಕ್ತಿ ಯೋಜನೆಯಡಿ ಸಾರಿಗೆ ಸಂಸ್ಥೆಗಳು ಕಾರ್ಯಾಚರಿಸುವ ಅನುಸೂಚಿಗಳ ಆಧಾರದ ಮೇಲೆ ಒಟ್ಟಾರೆಯಾಗಿ ಅನುದಾನವನ್ನು ನಿಗದಿ ಮಾಡಲಾಗುತ್ತಿದೆ.<br>ಶಕ್ತಿ ಯೋಜನೆಗೆ ಒಟ್ಟಾರೆಯಾಗಿ ಅನುದಾನ ಒದಗಿಸುವುದರೊಂದಿಗೆ ಕಾಲಕಾಲಕ್ಕೆ ವಿದ್ಯಾರ್ಥಿ ಪಾಸುಗಳ ಸಹಾಯಧನ, ನಿಗಮಗಳಿಂದ ಎತ್ತುವಳಿ ಮಾಡಿದ ಸಾಲದ ಮರುಪಾವತಿ ಮತ್ತು ಬಡ್ಡಿ ಪಾವತಿ, ಕಟ್ಟಡಗಳ ನಿರ್ಮಾಣ ಹಾಗೂ ಬಸ್ಸುಗಳ ಖರೀದಿಗೆ ಬಂಡವಾಳ ಸಹಾಯಧನ, VGF, ಮೋಟಾರು ವಾಹನ ತೆರಿಗೆ ವಿನಾಯಿತಿ ಆರ್ಥಿಕ ಸಹಾಯ, ವೇತನ, ಡೀಸೆಲ್, ಪಿ.ಎಫ್, ರಜೆ ನಗದೀಕರಣ ಮುಂತಾದವುಗಳ ಬಾಕಿ ಪಾವತಿಗೆ ಆರ್ಥಿಕ ಸಹಾಯ ಸೇರಿ ನಿಗಮಗಳಿಗೆ ಕಳೆದ 3 ವರ್ಷಗಳ ಅವಧಿಯಲ್ಲಿ ರೂ.18459.37 ಕೋಟಿಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-ಇ** ರಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: ಟಿಡಿ 209 ಟಿಸಿಕ್ಯೂ 2026**

**(ಬಿ.ಎಸ್. ಸುರೇಶ)**
ಸಾರಿಗೆ ಸಚಿವರು

ಅನುಬಂಧ-ಅ

## DETAILS OF EXPENDITURE AND RELEASES UNDER SHAKTHI SCHEME FROM 11.06.2023 TO 31.07.2026

(Amount Rs. In crs.)

| | 2023-24 (from June-23) | | | | 2024-25 | | | |
|---|---|---|---|---|---|---|---|---|
| CORPORATION | Grants allocated | Actual Expenditure Claimed | Releases | Balance Due | Grants allocated | Actual Expenditure | Releases | Balance Due |
| KSRTC | 1212.05 | 1664.42 | 1212.05 | 452.37 | 1905.20 | 2401.00 | 1905.20 | 495.80 |
| BMTC | 549.66 | 755.09 | 549.66 | 205.43 | 864.59 | 1059.37 | 864.59 | 194.78 |
| NWKRTC | 792.23 | 1076.13 | 792.23 | 283.90 | 1232.18 | 1507.73 | 1232.18 | 275.55 |
| KKRTC | 646.06 | 884.72 | 646.06 | 238.66 | 1013.03 | 1217.35 | 1013.03 | 204.32 |
| **TOTAL** | **3200.00** | **4380.36** | **3200.00** | **1180.36** | **5015.00** | **6185.45** | **5015.00** | **1170.45** |

| | 2025-26 | | | | 2026-27 (Jul-26) | | | |
|---|---|---|---|---|---|---|---|---|
| CORPORATION | Grants allocated | Actual Expenditure Claimed | Releases | Balance Due | Grants allocated | Actual Expenditure Claimed | Releases | Balance Due |
| KSRTC | 2052.01 | 2943.58 | 2052.01 | 891.57 | 2052.01 | 1030.59 | 687.09 | 343.50 |
| BMTC | 908.55 | 1404.82 | 908.55 | 496.27 | 908.55 | 493.36 | 320.95 | 172.41 |
| NWKRTC | 1293.28 | 1887.56 | 1293.28 | 594.28 | 1293.28 | 637.23 | 438.08 | 199.15 |
| KKRTC | 1046.16 | 1465.41 | 1046.16 | 419.25 | 1046.16 | 527.60 | 343.89 | 183.71 |
| **TOTAL** | **5300.00** | **7701.37** | **5300.00** | **2401.37** | **5300.00** | **2688.78** | **1790.01** | **898.77** |

### CONSOLIDATED (Jun-23 to Jul-26)

| Grants allocated | Actual Expenditure Claimed | Releases | Balance Due |
|---|---|---|---|
| **7221.27** | 8039.59 | 5856.35 | 2183.24 |
| **3231.35** | 3712.64 | 2643.75 | 1068.89 |
| **4610.97** | 5108.65 | 3755.77 | 1352.88 |
| **3751.41** | 4095.08 | 3049.14 | 1045.94 |
| **18815.00** | **20955.96** | **15305.01** | **5650.95** |

ಅನುಬಂಧ-ಆ

## ಶಕ್ತಿ ಯೋಜನೆಯ ನಾಲ್ಕು ಸಾರಿಗೆ ನಿಗಮಗಳ ಅಂಕಿ-ಅಂಶಗಳು

(ದಿನಾಂಕ: 11.06.2023 ರಿಂದ 31.07.2026 ರವರೆಗೆ)

(ರೂ.ಕೋಟಿಗಳಲ್ಲಿ)

| ಸಂಸ್ಥೆ/ನಿಗಮ | ವರ್ಷ | ಫಲಾನುಭವಿಗಳ ಟಿಕೆಟ್ ಸಂಖ್ಯೆ (ಕೋಟಿಗಳಲ್ಲಿ) | ಪ್ರಯಾಣದ ವೆಚ್ಚ |
|---|---|---|---|
| ಕ.ರಾ.ರ.ಸಾ.ನಿಗಮ | 2023-2024 | 56.27 | 1664.42 |
| | 2024-2025 | 75.98 | 2401.00 |
| | 2025-2026 | 83.42 | 2943.57 |
| | 2026-2027 | 28.26 | 1030.59 |
| ಬೆಂ.ಮ.ಸಾ.ಸಂಸ್ಥೆ | 2023-2024 | 57.84 | 755.10 |
| | 2024-2025 | 77.27 | 1059.37 |
| | 2025-2026 | 90.43 | 1404.82 |
| | 2026-2027 | 31.11 | 493.36 |
| ವಾ.ಕ.ರ.ಸಾ.ಸಂಸ್ಥೆ | 2023-2024 | 42.14 | 1076.13 |
| | 2024-2025 | 56.69 | 1507.74 |
| | 2025-2026 | 64.50 | 1887.57 |
| | 2026-2027 | 21.18 | 637.23 |
| ಕ.ಕ.ರ.ಸಾ.ನಿಗಮ | 2023-2024 | 26.81 | 884.72 |
| | 2024-2025 | 34.71 | 1217.35 |
| | 2025-2026 | 37.35 | 1465.41 |
| | 2026-2027 | 13.20 | 527.61 |
| ಒಟ್ಟಾರೆ (ನಾಲ್ಕು ನಿಗಮ / ಸಂಸ್ಥೆ) | **2023-2024** | **183.06** | **4380.37** |
| | **2024-2025** | **244.65** | **6185.46** |
| | **2025-2026** | **275.70** | **7701.37** |
| | **2026-2027** | **93.75** | **2688.79** |
| **ಒಟ್ಟಾರೆ** | | **797.16** | **20955.99** |

ಮುಖ್ಯ [illegible] ಅಧಿಕಾರಿ
ಕ.ರಾ.ರ.ಸಾ.ನಿಗಮ [illegible] ಕಚೇರಿ,
ಬೆಂಗಳೂರು

ಅನುಬಂಧ-ಇ

| Support to RTC's in Last 3 years | | | | | |
|---|---|---|---|---|---|
| | | | | | (Rs.in Lakhs) |
| **Sl No** | **Corporation** | **2023-24** | **2024-25** | **2025-26** | **Total Support** |
| 1 | KSRTC | 180374.54 | 238402.83 | 268974.66 | 687752.03 |
| 2 | BMTC | 92497.75 | 104272.85 | 141269.39 | 338039.99 |
| 3 | NWKRTC | 128568.70 | 160254.86 | 172531.48 | 461355.04 |
| 4 | KKRTC | 98039.57 | 125849.34 | 134900.91 | 358789.81 |
| **Total** | | **499480.56** | **628779.87** | **717676.44** | **1845936.87** |